## ಪ್ರಾರ್ಥನೆ

### ಭಾಗವತದಿಂದ

ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥

VIII. 3.2.

ಎಲ್ಲ ಜೀವಿಗಳಲ್ಲೂ ಚೈತನ್ಯವಾಗಿದ್ದು, ಅವುಗಳನ್ನು ಅನುಗ್ರಹಿಸುವ ಆ ಭಗವಂತನಿಗೆ ನಾವು ನಮಸ್ಕರಿಸುತ್ತೇವೆ. ಈ ಜಗತ್ತಿನ ಮೂಲಕಾರಣನೂ, ಪರಮ ಈಶ್ವರನೂ ಆದ ಆ ಮಹಾಪುರುಷನನ್ನು ಕುರಿತು ನಾವು ಧ್ಯಾನಿಸುತ್ತೇವೆ.

ಕೃಷ್ಣ ಕೃಷ್ಣ ಮಹಾಯೋಗಿನ್ ತ್ವಮಾದ್ಯಃ ಪುರುಷಃ ಪರಃ।
ವ್ಯಕ್ತಾವ್ಯಕ್ತಮಿದಂ ವಿಶ್ವಂ ರೂಪಂ ತೇ ಬ್ರಾಹ್ಮಣಾ ವಿದುಃ ॥
ತ್ವಮೇಕಃ ಸರ್ವಭೂತಾನಾಂ ದೇಹಾಸ್ವಾತ್ಮೇಂದ್ರಿಯೇಶ್ವರಃ।
ತ್ವಮೇವ ಕಾಲೋ ಭಗವಾನ್ ವಿಷ್ಣುರವ್ಯಯ ಈಶ್ವರಃ ॥

X.10.29-30

ಹೇ ಆಕರ್ಷಕ ರೂಪವುಳ್ಳ ದೇವ ಕೃಷ್ಣನೇ! ನೀನು ಯೋಗಿಗಳಲ್ಲಿ ಶ್ರೇಷ್ಠನು. ನೀನು ಪುರುಷೋತ್ತಮನು, ಎಲ್ಲಕ್ಕೂ ಆದಿಯು. ನಮಗೆ ತೋರುತ್ತಿರುವ ಈ ವ್ಯಕ್ತ ವಿಶ್ವ ಹಾಗೂ ತೋರದ ಅವ್ಯಕ್ತಗಳೆರಡೂ ನಿನ್ನ ಶರೀರವೆಂದು ಅನುಭಾವಿಗಳು ಹೇಳುತ್ತಾರೆ. ಎಲ್ಲ ಜೀವಗಳ ಶರೀರ, ಮನಸ್ಸು, ಇಂದ್ರಿಯಗಳು ಹಾಗೂ ಆತ್ಮಗಳ ಏಕೈಕ ಸ್ವಾಮಿ ನೀನೇ. ನೀನೇ ಕಾಲವಾಗಿ ಎಲ್ಲವನ್ನೂ ವ್ಯಾಪಿಸಿರುವವನು, ಅನಂತ ಗುಣಗಳುಳ್ಳವನು, ಸರ್ವಶಕ್ತನು, ನಾಶರಹಿತನು.

ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥

VIII. 3. 10

ನನ್ನ ಆತ್ಮವನ್ನು ಬೆಳಗಿಸುವ, ನನ್ನ ಅಂತಃಸಾಕ್ಷಿಯಾದ ಆ ಪರಮಾತ್ಮನಿಗೆ ನಮಸ್ಕಾರಗಳು. ಶಬ್ದಗಳಿಂದ, ಅಷ್ಟೇ ಏಕೆ, ಮನಸ್ಸು ಹಾಗೂ ಬುದ್ಧಿಯ ಸಾಮರ್ಥ್ಯದಿಂದಲೂ ವಿವರಿಸಲಾಗದ ಅವನಿಗೆ ನಮಸ್ಕಾರಗಳು.

---

## ಸೂಕ್ತಿಪ್ರಭ

- ಒಂದು ಮರವನ್ನು ಕಡಿಯಲು ನನಗೆ ಎಂಟು ಗಂಟೆಗಳ ಸಮಯಾವಕಾಶ ಸಿಕ್ಕಿದರೆ ನಾನು ಆರು ಗಂಟೆಗಳ ಕಾಲ ಕೊಡಲಿಯನ್ನು ಹರಿತಗೊಳಿಸಲು ಬಳಸುವೆ. – ಅಬ್ರಹಾಂ ಲಿಂಕನ್
- ದೂರ ಸಾಗಲು ಅಂಜದವರು ಮಾತ್ರ ತಾವೆಷ್ಟು ದೂರ ಹೋಗಬಹುದು ಎಂದು ತಿಳಿಯಬಲ್ಲರು. – ಜಾರ್ಜ್ ಈಲಿಯಟ್
- ನಿಮ್ಮ ಮುಕ್ತಿಯನ್ನು ನೀವೇ ಗಳಿಸಿಕೊಳ್ಳಿ, ಅದಕ್ಕಾಗಿ ಇತರರನ್ನು ಆಶ್ರಯಿಸಬೇಡಿ. – ಬುದ್ಧ
- ಯೋಜಿಸುವ ದೊಡ್ಡ ದೊಡ್ಡ ಕೆಲಸಗಳಿಗಿಂತಲೂ ಸಾಧಿಸಿದ ಸಣ್ಣ ಸಣ್ಣ ಕೆಲಸಗಳೇ ಉತ್ತಮ. –ಪೀಟರ್ ಮಾರ್ಷಲ್
- ನೀವು ಏನನ್ನು ನೋಡುವಿರಿ ಎಂಬುದು ಮುಖ್ಯವಲ್ಲ, ಏನನ್ನು ಕಾಣಬಲ್ಲಿರಿ ಎಂಬುದು ಮುಖ್ಯ. – ಹೆನ್ರಿ ಡೇವಿಡ್ ಥೋರೋ
- ಭವಿಷ್ಯದಲ್ಲಿ ಏನು ಕಾದಿದೆಯೋ ಅದು ನನಗೆ ಗೊತ್ತಿಲ್ಲ, ಆದರೆ ಭವಿಷ್ಯವನ್ನು ಯಾರು ರೂಪಿಸುತ್ತಾರೆ ಎಂಬುದು ನನಗೆ ತಿಳಿದಿದೆ. – ಅನಾಮಿಕ
- ಭವ್ಯವಾದ ಕಟ್ಟಡದ ಅತಿ ಮುಖ್ಯ ಕಲ್ಲು, ಕೆಳಗಿರುವ ಅಡಿಪಾಯದಲ್ಲಿದೆ. – ಖಲೀಲ್ ಗಿಬ್ರಾನ್
- ನಿಮ್ಮ ಬಳಿಯಿರುವ ಸಲಕರಣೆ ಕೇವಲ ಒಂದು ಸುತ್ತಿಗೆಯಾಗಿದ್ದರೆ, ನಿಮ್ಮ ಎಲ್ಲ ಸಮಸ್ಯೆಗಳನ್ನೂ ಮೊಳೆಗಳೆಂದೇ ಭಾವಿಸಲು ನೀವು ಪ್ರಾರಂಭಿಸುವಿರಿ. – ಅಬ್ರಹಾಂ ಮಾಸ್ಲೋ
- ಸುಖದ ಬಯಕೆಯೇ ದುಃಖಕ್ಕೆ ಮೂಲ ಕಾರಣ. – ಎರಿಕ್ ಹಾಫರ್
- ನಾವು ಈ ಜಗತ್ತಿನಲ್ಲಿ ಹುಟ್ಟಿ ಬಂದಾಗ ನಮ್ಮ ಬಳಿ ಬೇರಾವ ಅಸ್ತ್ರವೂ ಇರಲಿಲ್ಲ – ಮನಸ್ಸೇ ನಮ್ಮ ಪ್ರಮುಖ ಅಸ್ತ್ರ. – ಆ್ಯನ್ ರ್‍ಯಾಂಡ್
- ನಿಮ್ಮ ಕಹಳೆಯನ್ನು ಬೇರೆ ಯಾರಿಗಾದರೂ ಊದಲು ಬಿಡಿ. ಆಗ ಅದರ ಸದ್ದು ಎರಡು ಪಟ್ಟು ದೂರ ಸಾಗುತ್ತದೆ! – ವಿಲ್ ರಾಗರ್